**ಕನ್ನಡ ನಾಟಕ ಪರಂಪರೆ ಮತ್ತು 'ರಸಗಂಗಾಧರ'.**

-ಕಿರಣ ವಲ್ಲೇಪುರೆ.
ಸಂಶೋಧನ ವಿದ್ಯಾರ್ಥಿ,
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
ಮೊ.೭೦೨೨೪೮೮೦೧೮

ನಾಟಕವು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದು ಪ್ರಮುಖ ಸಾಹಿತ್ಯ ಪ್ರಕಾರವಾಗಿ ಬೆಳೆದಿದೆ. ಇಂಗ್ಲೀಷ್‌ನ 'ಡ್ರಾಮಾ' ಎಂಬುದಕ್ಕೆ ಪರ್ಯಾಯವಾಗಿ ಕನ್ನಡದಲ್ಲಿ ನಾಟಕ ಎಂದು ಕರೆಯಲಾಗುತ್ತದೆ. ನಾಟಕದಲ್ಲಿ ಐತಿಹಾಸಿಕ, ಪೌರಾಣಿಕ, ಸಾಮಾಜಿಕ ನಾಟಕ ಎಂಬ ಬಗೆಗಳನ್ನು ಗುರುತಿಸಲಾಗುತ್ತದೆ. ಆರಂಭದಲ್ಲಿ ಅನುವಾದದ ಮೂಲಕ ಕನ್ನಡದಲ್ಲಿ ನಾಟಕಗಳು ರಚನೆಯಾಗಿದ್ದು ಕಂಡುಬರುತ್ತದೆ. ಸಿಂಗಾರಾರ್ಯನು ರಚಿಸಿದ 'ಮಿತ್ರಾವಿಂದ ಗೋವಿಂದ'(೧೬೮೦) ಕನ್ನಡದ ಮೊದಲ ನಾಟಕವಾಗಿದ್ದು; ಹರ್ಷನು ಸಂಸ್ಕೃತ ಭಾಷೆಯಲ್ಲಿ ರಚಿಸಿದ 'ರತ್ನಾವಳಿ' ನಾಟಕದ ಅನುವಾದವಾಗಿದೆ. ವೆಂಕಟರಮಣಶಾಸ್ತ್ರೀ ಸೂರಿ ಅವರು ರಚಿಸಿದ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ'(೧೮೮೭) ಕನ್ನಡದ ಮೊದಲ ಸಾಮಾಜಿಕ ನಾಟಕವಾಗಿದೆ. ಬಸಪ್ಪಶಾಸ್ತ್ರೀಯವರು ಕಾಳಿದಾಸನ 'ಶಾಕುಂತಲ', 'ವಿಕ್ರಮೋರ್ವಶಿಯ' ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಷೇಕ್ಸಪೀಯರ್‌ನ ಒಥೆಲೊ ನಾಟಕವನ್ನು 'ಶೂರಸೇನೆ ಚರಿತೆ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಅನಂತರದಲ್ಲಿ ಬಹಳಷ್ಟು ನಾಟಕಗಳು ಕನ್ನಡದಲ್ಲಿ ರಚನೆಯಾದವು.

ಬಿ.ಎಂ.ಶ್ರೀಯವರು 'ಗದಾಯುದ್ಧ ನಾಟಕಂ', 'ಅಶ್ವತ್ಥಾಮನ್', 'ಪಾರಸಿಕರು' ನಾಟಕಗಳನ್ನು ರಚಿಸಿದ್ದಾರೆ. 'ಅಶ್ವತ್ಥಾಮನ್' ನಾಟಕವನ್ನು ಸಾಫೋಕ್ಲಿಸನ 'ಏಜಾಕ್ಸ್' ನಾಟಕವನ್ನು ಆಶ್ರಯಿಸಿ, ಮಹಾಭಾರತದ ಕಥೆಯೊಂದಿಗೆ ಹೊಂದಿಸಿಕೊಂಡು ರಚಿಸಲಾಗಿದೆ. ಕುವೆಂಪು ಅವರು 'ಸ್ಮಶಾನ ಕುರುಕ್ಷೇತ್ರ', 'ರಕ್ತಾಕ್ಷಿ', 'ಶೂದ್ರ ತಪಸ್ವಿ', 'ಬೆರಳ್‌ಗೆ ಕೊರಳ್' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. 'ಸ್ಮಶಾನ ಕುರುಕ್ಷೇತ್ರ' ಯುದ್ಧದ ಪರಿಣಾಮಗಳನ್ನು ತೀವ್ರವಾಗಿ ಕಟ್ಟಿಕೊಡುವ ನಾಟಕವಾಗಿದೆ. 'ರಕ್ತಾಕ್ಷಿ' ನಾಟಕವು ಷೇಕ್ಸ್ಪಿಯರನ ಹ್ಯಾಮ್ಲೆಟ್ ನಾಟಕದ ಆಧರಿತವಾಗಿದ್ದು, ಬಿದನೂರಿನ ಇತಿಹಾಸವನ್ನು ನಿರೂಪಿಸುತ್ತದೆ. 'ಶೂದ್ರ ತಪಸ್ವಿ'ಯು ರಾಮಾಯಣದ ಕಥೆಯ ಆಧಾರಿತವಾಗಿದ್ದು, ಶಂಬೂಕ ತಪಸ್ವಿಯ ಕಥಾನಕವನ್ನು ವಿವರಿಸುತ್ತದೆ. 'ಬೆರಳ್‌ಗೆ ಕೊರಳ್' ನಾಟಕದಲ್ಲಿ ಏಕಲವ್ಯನ ಕಥೆ ಇದೆ. ನಂತರದಲ್ಲಿ ವರಕವಿ ಬೇಂದ್ರೆಯವರು 'ದೆವ್ವದ ಮನೆ', 'ಸಾಯೋ ಆಟ' ಎಂಬ ನಾಟಕಗಳ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ಚಿತ್ರಿಸಿದ್ದಾರೆ.

ಟಿ.ಪಿ.ಕೈಲಾಸಂ ಅವರು 'ಟೊಳ್ಳುಗಟ್ಟಿ', 'ಹೋಂರೂಲು', 'ಬಹಿಷ್ಕಾರ', 'ಬಂಡ್ವಾಳಿಲ್ಲದ ಬಡಾಯಿ', 'ಸತ್ತವನ ಸಂತಾಪ', 'ಸೂಳೆ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ಇವರ ನಾಟಕಗಳು ಸಾಮಾಜಿಕ ರೋಗಗಳನ್ನು ಚಿತ್ರಿಸುವ ಮೂಲಕ ವೈಚಾರಿಕ ಅರಿವನ್ನು ಮೂಡಿಸುತ್ತವೆ. ನಾಟಕಗಳನ್ನು ಜನಸಾಮಾನ್ಯರ ಬಳಿಗೆ ತಂದ ಕೈಲಾಸಂ ಅವರಿಗೆ ಚಾರಿತ್ರಿಕವಾಗಿ ಕನ್ನಡ ನಾಟಕ ಪರಂಪರೆಯಲ್ಲಿ ಮಹತ್ವದ ಸ್ಥಾನವಿದೆ. ನಂತರದಲ್ಲಿ ಶ್ರೀರಂಗರು 'ಉದರ ವೈರಾಗ್ಯ', 'ಹರಿಜನ್ವಾರ' ಮುಂತಾದ ನಾಟಕಗಗಳನ್ನು ರಚಿಸಿದ್ದಾರೆ. ಇವರು ಹೊಸ ತಂತ್ರಗಳೊಂದಿಗೆ ನಾಟಕಗಳನ್ನು ರಚಿಸಿದ್ದು, ಅವು ರಂಗದ ಮೇಲೆ ಪ್ರಯೋಗಗೊಂಡು ಯಶಸ್ವಿಯಾಗಿವೆ. ಕನ್ನಡ ನಾಟಕ ಸಾಹಿತ್ಯದಲ್ಲಿ ಹೆಸರಿಸಬೇಕಾದ ಇನ್ನೊಂದು ಮುಖ್ಯ ಹೆಸರು ಪರ್ವತವಾಣಿ. ಅವರ 'ಉಂಡಾಡಿ ಗುಂಡ' ನಾಟಕವು ರಂಗದ ಮೇಲೆ ಪ್ರದರ್ಶನಗೊಂಡು ಯಶಸ್ವಿಯಾಗಿದೆ. ಇದು ಆಲಿವರ್ ಗೋಲ್ಡಿಸ್ಮಿತ್‌ನ 'ಷಿ ಸ್ಟೂಪ್ಸ್ ಟು ಕಾನ್‌ಕರ್' ಎಂಬ ಇಂಗ್ಲೀಷ್ ನಾಟಕದ ರೂಪಾಂತರವಾಗಿದೆ. ಇವರು 'ಬಹದ್ದೂರ ಗಂಡ', 'ಸತಿ ಸಾವಿತ್ರಿ', 'ಕೀಚಕ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ಇವರ ನಾಟಕಗಳಲ್ಲಿ ಸೋಗಸಾದ ರಂಗಪ್ರಜ್ಞೆ ಇದೆ.

ಚಂಪಾ ಅವರು 'ಕೊಡೆಗಳು', 'ಅಪ್ಪ', 'ಕುಂಟಾ ಕುಂಟಾ ಕುರವತ್ತಿ', 'ಗುರ್ತಿನವರು', 'ಟಿಂಗರ ಬುಡ್ಡಣ್ಣ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ಇವರ 'ಕೊಡೆಗಳು' ಎಂಬ ನಾಟಕದಲ್ಲಿ ಕ್ಷ ಮತ್ತು ಯ ಎಂಬ ಎರಡು ಪಾತ್ರಗಳ ಮೂಲಕ ಚಮತ್ಕಾರಿಕ ಸಂಭಾಷಣೆಯಿದೆ. ಇದು ಕನ್ನಡದ ಅತ್ಯುತ್ತಮ ಅಸಂಗತ ನಾಟಕವಾಗಿದೆ. ಪಿ. ಲಂಕೇಶರು 'ಬಿರುಕು', 'ಗುಣಮುಖ', 'ತೆರೆಗಳು', 'ಕ್ರಾಂತಿ ಬಂತು ಕ್ರಾಂತಿ', 'ಸಂಕ್ರಾಂತಿ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ಇವರ 'ಸಂಕ್ರಾಂತಿ' ನಾಟಕವು ಮಹತ್ವದ್ದಾಗಿದ್ದು, ೧೨ನೇ ಶತಮಾನದ ಬಸವಣ್ಣನ ಕಲ್ಯಾಣಕ್ರಾಂತಿಯ ಕುರಿತದ್ದಾಗಿದೆ.

ಆಧುನಿಕ ಕನ್ನಡ ನಾಟಕ ಸಾಹಿತ್ಯದಲ್ಲಿ ಗಿರೀಶ ಕಾರ್ನಾಡರದ್ದು ಗಟ್ಟಿಯಾದ ಸ್ಥಾನ. ಅವರು 'ಯಯಾತಿ', 'ತುಘಲಕ್', 'ಹಯವದನ', 'ನಾಗಮಂಡಲ', 'ತಲೆದಂಡ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. 'ಯಯಾತಿ'ಯು ಕಾರ್ನಾಡರ ಮೊದಲ ನಾಟಕವಾಗಿದೆ. 'ತುಘಲಕ್' ಐತಿಹಾಸಿಕ ನಾಟಕವಾಗಿದ್ದು, ಮಹಮ್ಮದ್-ಬಿನ್-ತುಘಲಕ್‌ನ ಕುರಿತದ್ದಾಗಿದೆ. ಸಾಹಿತ್ಯಿಕವಾಗಿ ಮತ್ತು ರಂಗಭೂಮಿ ದೃಷ್ಟಿಯಿಂದ ಈ ನಾಟಕ ಮಹತ್ವದ್ದಾಗಿದೆ. 'ಹಯವದನ'ವು ಬಯಲಾಟವಾಗಿದ್ದು, ದೇವದತ್ತ, ಕಪಿಲ ಎಂಬ ಗೆಳೆಯರು ಮತ್ತು ಪದ್ಮಿನಿ ಎಂಬ ಹೆಣ್ಣಿನ ಕಥೆಯನ್ನು ಒಳಗೊಂಡಿದೆ. 'ನಾಗಮಂಡಲ'ವು ಜಾನಪದ ಕಥೆಯನ್ನು ಆಧರಿಸಿದ ನಾಟಕವಾಗಿದೆ. ಇವರ 'ತಲೆದಂಡ' ೧೨ನೇ ಶತಮಾನದ ಬಸವಣ್ಣನ ಕುರಿತದ್ದಾಗಿದ್ದು, ಕನ್ನಡದ ಮಹತ್ವದ ನಾಟಕಗಳಲ್ಲೊಂದಾಗಿದೆ.

ಉತ್ತರ ಕರ್ನಾಟಕದ ಜನಪದ ರಂಗಭೂಮಿಯಿಂದ ಪ್ರಭಾವಿತರಾದ ಚಂದ್ರಶೇಖರ ಕಂಬಾರರು 'ಜೋಕುಮಾರಸ್ವಾಮಿ', 'ಸಂಗ್ಯಾಬಾಳ್ಯಾ', 'ಹರಕೆಯ ಕುರಿ', 'ಸಿರಿಸಂಪಿಗೆ', 'ತುಕ್ರನ ಕನಸು', 'ಮಹಾಮಾಯಿ' 'ಕಾಡುಕುದುರೆ', 'ನಾಯೀ ಕತೆ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. 'ಜೋಕುಮಾರಸ್ವಾಮಿ'ಯು 'ಉಳುವವನೆ ಹೊಲದೊಡೆಯ' ಎಂಬ ತತ್ವದೊಂದಿಗೆ ಜೋಕುಮಾರಸ್ವಾಮಿಯ ಕಥೆಯನ್ನು ಹೋಲಿಕೆಯಾಗಿ ನಾಟಕವು ರಚನೆಯಾಗಿದೆ. 'ಹರಕೆಯ ಕುರಿ' ನಾಟಕದ ವಸ್ತು ರಾಜಕೀಯ ಸುತ್ತ ಹರಡಿದೆ. 'ಕಾಡುಕುದುರೆ' ನಾಟಕದಲ್ಲಿ ಊಳಿಗಮಾನ್ಯ ಸಂಸ್ಕೃತಿಯ ಅವನತಿಯ ಚಿತ್ರಣವಿದೆ. 'ಮಹಾಮಾಯಿ'ಯು ಸಾವಿನ ದೇವತೆಯಾದ ಮೃತ್ಯುದೇವತೆ ಕುರಿತದ್ದಾಗಿದೆ. ಇವರ 'ಸಿರಿಸಂಪಿಗೆ' ನಾಟಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಆ ನಂತರದಲ್ಲಿ ಎಚ್.ಎಸ್.ಶಿವಪ್ರಕಾಶರು 'ಮಹಾಚೈತ್ರ', 'ಸುಲ್ತಾನ ಟಿಪ್ಪು', 'ಮಾಧವಿ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ಇವರಲ್ಲದೇ ಇನ್ನೂ ಅನೇಕರು ಹಲವಾರು ನಾಟಕಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. ಈ ಆಧುನಿಕ ನಾಟಕಗಳು ಕನ್ನಡಕ್ಕೆ ಹೊಸ ಸಂವೇದನೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ.

ಕನ್ನಡದ ಸೂಕ್ಷ್ಮ ಸಂವೇದನೆಯ ಕವಿ, ವಿಮರ್ಶಕ ಹಾಗೂ ನಾಟಕಕಾರರಾದ ವಿಕ್ರಮ ವಿಸಾಜಿ ಅವರು ರಚಿಸಿದ 'ರಸಗಂಗಾಧರ' ನಾಟಕವು ೨೦೧೭ರಲ್ಲಿ ಪ್ರಕಟವಾಗಿದ್ದು, ಇದು ಅವರ ಮೊದಲನೆಯ ನಾಟಕವಾಗಿದೆ. ಇದರಲ್ಲಿ ಒಟ್ಟು ಹತ್ತು ದೃಶ್ಯಗಳಿವೆ. ಇದು ೬೩ ಪುಟದ ಸಣ್ಣ ನಾಟಕವಾಗಿದೆ. ಐತಿಹಾಸಿಕ ವಿಷಯ-ವಸ್ತುವನ್ನು ಹೊಂದಿದ ಈ ನಾಟಕದಲ್ಲಿ ಜಗನ್ನಾಥ ಪಂಡಿತ, ಷಾಜಹಾನ, ಲಾವಂಗಿ, ಔರಂಗಜೇಬ, ದಾರಾಶಿಖೊ ಮುಖ್ಯ ಪಾತ್ರಗಳಾಗಿವೆ. ೧೭ನೇ ಶತಮಾನದ ಕವಿ ಮತ್ತು ಕಾವ್ಯಮೀಮಾಂಸಕನಾದ ಜಗನ್ನಾಥ ಪಂಡಿತ ಈ ನಾಟಕದ ಕೇಂದ್ರ ಪ್ರಜ್ಞೆ. ಜಗನ್ನಾಥ ಪಂಡಿತನು ರಚಿಸಿದ 'ರಸಗಂಗಾಧರ' ಎಂಬ ಕಾವ್ಯಮೀಮಾಂಸೆ ಕೃತಿಯ ಹೆಸರನ್ನೆ ಲೇಖಕರು ಈ ನಾಟಕಕ್ಕೆ ಹೆಸರಿಟ್ಟಿದ್ದು ವಿಶೇಷ. ಜಗನ್ನಾಥ ಪಂಡಿತನು ಬರೆದ ಕಾವ್ಯ ಮತ್ತು ಆತನ ವಿದ್ವತ್ತನ್ನು ಗಮನಿಸಿ ಆತನನ್ನು ಮೊಗಲ್ ಆಸ್ಥಾನದ ವಿದ್ವಾಂಸನನ್ನಾಗಿ ನೇಮಿಸಿಕೊಳ್ಳಲಾಗುತ್ತದೆ. ಈ ಜಗನ್ನಾಥ ಪಂಡಿತನು ಮೊಗಲ್ ದೊರೆ ಷಾಜಹಾನ್‌ನ ಆಸ್ಥಾನವನ್ನು ಪ್ರವೇಶಿಸುವುದರೊಂದಿಗೆ ನಾಟಕ ಆರಂಭವಾಗುತ್ತದೆ.

ಮೊದಲನೆಯ ದೃಶ್ಯದಲ್ಲಿ ಷಾಜಹಾನ್ ಮತ್ತು ಜಗನ್ನಾಥ ಪಂಡಿತರ ನಡುವೆ ಸಂಭಾಷಣೆ ನಡೆಯುತ್ತದೆ. ಇಲ್ಲಿ ಕಾವ್ಯ, ಕಾವ್ಯಮೀಮಾಂಸೆ, ಆತ್ಮರಕ್ಷಣೆ, ಸೂರ್ಯೋದಯದ ಕುರಿತು ಪರಸ್ಪರ ಆರೋಗ್ಯಕರ ಚರ್ಚೆ ನಡೆಯುತ್ತದೆ. ಇಲ್ಲಿ ಷಾಜಹಾನ್‌ಗೆ ಜಗನ್ನಾಥ ಪಂಡಿತರ ವಿದ್ವತ್ತಿನ ಬಗ್ಗೆ ಗೌರವವಿರುವುದು ಕಂಡು ಬರುತ್ತದೆ.

ಎರಡನೆಯ ದೃಶ್ಯದಲ್ಲಿ ಷಾಜಹಾನ್ ಮತ್ತು ಆಸ್ಥಾನದ ಇತಿಹಾಸಕಾರನಾದ ಅಬ್ದುಲ್ ಹಮೀದ್ ಲಾಹೋರಿ ನಡುವೆ ಸಂಭಾಷಣೆ ನಡೆಯುತ್ತದೆ. ಇಲ್ಲಿ ಸಾಮ್ರಾಜ್ಯ, ಚರಿತ್ರೆ, ಕಾವ್ಯದ ಬಗ್ಗೆ ಮತ್ತು ಜಗನ್ನಾಥ ಪಂಡಿತ, ದಾರಾಶಿಖೊ, ಲಾವಂಗಿಯ ಮೇಲಿನ ದೂರುಗಳ ಬಗ್ಗೆ ಮಾತುಕತೆ ನಡೆಯುತ್ತದೆ.

ಮೂರನೆಯ ದೃಶ್ಯದಲ್ಲಿ ಷಾಜಹಾನ್‌ನ ಮಗಳು ಲಾವಂಗಿ ಮತ್ತು ಜಗನ್ನಾಥ ಪಂಡಿತರ ನಡುವೆ ಪ್ರೇಮದ ಸಂಭಾಷಣೆ ನಡೆಯುತ್ತದೆ. ಇವರಿಬ್ಬರ ನಡುವಿನ ಆಪ್ತ ಮಾತುಕತೆಯನ್ನು ಲೇಖಕರು ನಾಟಕೀಯ ಅಂಶಗಳನ್ನೊಳಗೊಂಡಂತೆ ರಮಣೀಯವಾಗಿ ನಿರೂಪಿಸಿದ್ದಾರೆ. ಇಲ್ಲಿ ಲಾವಂಗಿ ಕೇಳುವ "ನದಿಗೆ ಸಿಕ್ಕ ದಡ ಆಸರೆಯೊ ಬಂಧನವೊ?, ಹೂ ಕಾಯುವ ಮುಳ್ಳು ಆಸರೆಯೊ ಬಂಧನವೊ?,.... ಹಾಗೆಯೇ ಈ ಲಾವಂಗಿಯ ಪ್ರೇಮ ನಿಮಗೆ ಆಸರೆಯೊ ಬಂಧನವೋ?"(ರಸಗಂಗಾಧರ, ಪು-೧೯) ಎಂಬ ಪ್ರಶ್ನೆ ಚಿಂತನೆಗೀಡು ಮಾಡುತ್ತದೆ. ಇದಕ್ಕೆ ಉತ್ತರವಾಗಿ ಸೂಕ್ಷ್ಮತೆಯಿಂದ ಜಗನ್ನಾಥ ಪಂಡಿತರು "ಎಲ್ಲಾ ದುರಾಸೆಗಳನ್ನು ಮೀರಿದ ಒಂದು ಪವಿತ್ರತಮ ಸಂಬಂಧ ಸಾಧ್ಯವಾದರೆ ಬಂಧನವೂ ಬಿಡುಗಡೆಯಾಗಿ ತೋರುವುದು."(ರಸಗಂಗಾಧರ, ಪು-೧೯) ಎಂದು ಹೇಳುವರು.

ನಾಲ್ಕನೆಯ ದೃಶ್ಯದಲ್ಲಿ ಜಗನ್ನಾಥ ಪಂಡಿತರ ಮೇಲಿನ ಆರೋಪದ ವಿಚಾರಣೆಗೆ ಷಾಜಹಾನ್, ಅಬ್ದುಲ್ ಹಮೀದ್ ಲಾಹೋರಿ, ಔರಂಗಜೇಬ್, ಸೈಯದ್ ಜಲಾಲುದ್ದೀನ್, ಭಾಸ್ಕರ ದೀಕ್ಷಿತ, ಬಹಾವುದ್ದೀನ್ ಕಾಜಿ, ದಾರಾಶಿಖೊ, ಪ್ರಭಾಕರ ಭಟ್ಟರನ್ನು ಒಳಗೊಂಡಂತೆ ದೊರೆಯ ದರ್ಬಾರು ಸೇರುತ್ತದೆ. ಇಲ್ಲಿ ಎಲ್ಲರೂ ಜಗನ್ನಾಥ ಪಂಡಿತರ ವಿರುದ್ಧ ರಾಜಾಸ್ಥಾನದಲ್ಲಿದ್ದು ರಾಜಪುತ್ರಿಯನ್ನು ಪ್ರೀತಿಸಿದ್ದು ರಾಜದ್ರೋಹ, ಬ್ರಾಹ್ಮಣನಾಗಿ ಮುಸ್ಲಿಂಳನ್ನು ಪ್ರೀತಿಸಿದ್ದು ಧರ್ಮದ್ರೋಹವೇ ಎಂಬ ಆಪಾದನೆಗಳನ್ನು ಮಾಡುತ್ತಾರೆ. ಒಬ್ಬ ಉತ್ತಮ ಗೆಳೆಯನಾಗಿ ದಾರಾಶಿಖೊ ಈ ಸಂದರ್ಭದಲ್ಲಿ ಜಗನ್ನಾಥ ಪಂಡಿತರ ಪರ ನಿಲ್ಲುವುದು ಗಮನಾರ್ಹವಾಗಿದೆ. ಜಗನ್ನಾಥ ಪಂಡಿತನು ಷಾಜಹಾನಗೆ, "ಹುಜೂರ್..... ನಾನು ಬಾದಷಾಹ ಅಕ್ಬರರ ಬಗ್ಗೆಯೂ ಕೇಳಿರುವೆ. ದಿಲ್ಲಿಯಿಂದ ಕಾಬೂಲ್‌ವರೆಗೆ ತಮ್ಮ ಪ್ರೇಮವೂ ಪರಿಚಿತವೆ. ಲಾವಂಗಿಯನ್ನು ಪ್ರೀತಿಸಿದ್ದು ತಪ್ಪು ಎಂದಾದರೆ ಹೌದು..... ನಾನು ತಪ್ಪು ಮಾಡಿರುವೆ."(ರಸಗಂಗಾಧರ, ಪು-೩೪) ಎಂದು ಹೇಳುವನು. ಕೊನೆಗೆ ಷಾಜಹಾನ ಗಡಿಪಾರಿನ ತೀರ್ಪು ನೀಡುವನು.

ಐದನೆಯ ದೃಶ್ಯದಲ್ಲಿ ವ್ಯಕ್ತಿಯೊಬ್ಬ ಜಗನ್ನಾಥ ಪಂಡಿತರ ವಿಚಾರಣೆ ಕುರಿತು ಬಂದ ರಾಜಾಜ್ಞೆ ತೀರ್ಪಿನ ಡಂಗುರ ಸಾರುತ್ತಾನೆ. ಜಗನ್ನಾಥ ಪಂಡಿತರಿಗೆ ರಾಜದ್ರೋಹದ ಮೇಲೆ ದಿಲ್ಲಿಯಿಂದ ಗಡಿಪಾರು ಮಾಡಲಾಗಿದೆ, ಅವರ ಕೃತಿಗಳನ್ನ ಓದಬಾರದು; ಸುಡಬೇಕು. ತಪ್ಪಿದ್ದಲ್ಲಿ ಕಠಿಣ ಶಿಕ್ಷೆ, ಇದು ರಾಜಾಜ್ಞೆ ಎಂದು ಡಂಗುರ ಸಾರಲಾಗುತ್ತದೆ.

ಆರನೆಯ ದೃಶ್ಯದಲ್ಲಿ ರಾಜಾಜ್ಞೆ ತೀರ್ಪಿನ ಕುರಿತು ವಾರಣಾಸಿಯಲ್ಲಿ ನಾಲ್ಕು ಬ್ರಾಹ್ಮಣ ಪಂಡಿತರ ನಡುವೆ ಪರಸ್ಪರ ಮಾತುಕತೆ ನಡೆಯುತ್ತದೆ. ಇಲ್ಲಿ ಜಗನ್ನಾಥ ಪಂಡಿತರ ಕುರಿತು ಅವರಿಗೆ ಶಿಕ್ಷೆಯಾಗಿದ್ದು ಒಳ್ಳೆಯದಾಯಿತು, ಸುಲ್ತಾನ ಸರಿಯಾಗಿ ಪಾಠ ಕಲಿಸಿದ್ದಾನೆ, ಆತನ ಬಗ್ಗೆ ನಮಗೆ ಮೊದಲಿನಿಂದಲೂ ಅನುಮಾನವಿತ್ತು ಎಂದು ಮಾತನಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ವ್ಯಕ್ತಿ ಏಡವುದೇ ತಡ ಕೇಲವರು ಅವನನ್ನು ಹಿಗ್ಗಾ-ಮುಗ್ಗಾ ತರಾಟೆಗೆ ತೆಗೆದುಕೊಳ್ಳುವುದುಂಟು. ಇಲ್ಲಾದದ್ದೂ ಇದೆ. ಕೊನೆಗೆ ಜಗನ್ನಾಥರ ಮನೆಗೆ ಬೆಂಕಿ ಹಚ್ಚಿ ಸುಡಲಾಗುತ್ತದೆ.

ಏಳನೆಯ ದೃಶ್ಯದಲ್ಲಿ ಅಬ್ದುಲ್ ಹಮ್ಮಿದ್ ಲಾಹೋರಿ, ಲಾವಂಗಿ, ಔರಂಗಜೇಬ್‌ರ ನಡುವೆ ಮಾತುಕತೆ ನಡೆಯುತ್ತದೆ. ಇಲ್ಲಿ ಔರಂಗಜೇಬ ಸುಲ್ತಾನನಾಗಿ, "ಯಾರೂ ತಟ್ಟೆಯಲ್ಲಿಟ್ಟು ಅಧಿಕಾರ ಕೊಡುವುದಿಲ್ಲ. ಅದನ್ನು ಕುತಂತ್ರದಿಂದ ಇಲ್ಲವೆ ಖಡ್ಗದ ಮೊನೆಯಿಂದ ಸಂಪಾದಿಸಬೇಕು"(ರಸಗಂಗಾಧರ, ಪು-೪೧) ಎಂದು ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತಾನೆ. ಲಾವಂಗಿಯು ಅಣ್ಣ ದಾರಾಶಿಖೊನ ಹತ್ಯೆಗೆ ಮರುಗುವಳು, ಕೊರಗುವಳು. ಅಧಿಕಾರ, ಅಂತಸ್ತಿನಿಂದ ದೂರವಿದ್ದು, ತನ್ನ ಪಾಡಿಗೆ ತಾನು ಆಧ್ಯಾತ್ಮದೆಡೆಗೆ ಸಾಗುತ್ತಿರುವವನ ಹತ್ಯೆ ನಿಜಕ್ಕೂ ಖಂಡನಾರ್ಹವಾದದ್ದು. ಯಾವಾಗಲೂ ಪ್ರಭುತ್ವ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಆಕ್ರಮಣಕಾರಿ ನೀತಿಯನ್ನು ಅನುಸರಿಸುತ್ತದೆ. ಇಲ್ಲವೇ ಎದುರಾಳಿಯನ್ನು ಹತ್ತಿಕ್ಕುವ ಕೆಲಸ ಮಾಡುತ್ತದೆ.

ಇಲ್ಲಿ ಔರಂಗಜೇಬ ತಾನು ಸುಲ್ತಾನನಾಗಲು, ಅಧಿಕಾರ ತನ್ನಲ್ಲಿ ಕೇಂದ್ರೀಕರಿಸಿಕೊಳ್ಳಲು ತಂದೆಯನ್ನು ಹತ್ತಿಕ್ಕಿದ್ದು, ಅಣ್ಣನಾದ ದಾರಾಶಿಖೊನನ್ನು ಕೊಲೈಗೈದಿದ್ದಿದ್ದು ಇದಕ್ಕೆ ನಿದರ್ಶನ. ಕೊನೆಗೆ ಔರಂಗಜೇಬನು ಒಳಸಂಚುಗಳಿಂದ ಅಧಿಕಾರಕ್ಕೆ ಬಂದರೂ, ಆತನಿಗೆ ಕನಸುಗಳು ಮತ್ತು ನೆನಪುಗಳ ಭಯ ತೀವ್ರವಾಗಿ ಕಾಡುತ್ತದೆ.

ಎಂಟನೆಯ ದೃಶ್ಯದಲ್ಲಿ ಜಗನ್ನಾಥ ಪಂಡಿತ ಹಾಗೂ ಆತನ ಗೆಳೆಯ ವಾಸುದೇವ ಪಂಡಿತರ ನಡುವೆ ಸಂಭಾಷಣೆ ನಡೆಯುತ್ತದೆ. ಇಲ್ಲಿ ಜಗನ್ನಾಥ ಪಂಡಿತರು ವಾರಣಾಸಿಯ ಗೆಳೆಯನ ಮನೆಯಲ್ಲಿ ಬಾಗಿಲು ಭದ್ರಪಡಿಸಿಕೊಂಡು ಆತಂಕದಲ್ಲಿ ಕುಳಿತಿರುತ್ತಾರೆ. ಇಲ್ಲಿ ಧರ್ಮದಿಂದ ಬಹಿಷ್ಕಾರಗೊಂಡದ್ದು ಹಾಗೂ ಲಾವಂಗಿಯ ಪ್ರೀತಿ, ಷಾಜಹಾನರ ಆತ್ಮೀಯತೆ ಕುರಿತು ಮಾತುಕತೆ ನಡೆಯುತ್ತದೆ. ದೆಹಲಿಯಲ್ಲಿ ಔರಂಗಜೇಬನು ಕುತಂತ್ರದಿಂದ ಅಧಿಕಾರಕ್ಕೆ ಬಂದ ಮತ್ತು ತನ್ನ ಅಣ್ಣ ದಾರಾಶಿಖೊನನ್ನು ಕೊಲೆ ಮಾಡಿದ ಸಂಗತಿ ತಿಳಿದು ಜಗನ್ನಾಥ ಪಂಡಿತನು ಆ ಮೊದಲೇ ಷಾಜಹಾನರು "ಪಂಡಿತರೇ, ಸಾವಿರ ಸಾಮಂತರನ್ನು ಎದುರಿಸಬಹುದು, ಆದರೆ ಎದೆಯ ಮೇಲಾಡಿದ ಮಕ್ಕಳೆ ಎದುರಾಡಿದರೆ ಎದುರಿಸುವ ಶಕ್ತಿಯೇ ಉಳಿದಿರುವುದಿಲ್ಲ"(ರಸಗಂಗಾಧರ, ಪು-೫೪) ಎಂದು ಹೇಳಿದ ಮಾತನ್ನು ನೇನಪಿಸಿಕೊಳ್ಳುವನು. ತನ್ನ ಮನೆ ಸುಟ್ಟ ವಿಚಾರ ತಿಳಿದು ತೀವ್ರ ದುಃಖಕ್ಕೀಡಾಗುವನು. ಈ ಎಲ್ಲಾ ಘಟನೆಗಳಿಂದ ಜಗನ್ನಾಥನ ಕೋಮಲ ಮನಸ್ಸು ನಲುಗಿ ಹೋಗಿ, ಖಿನ್ನತೆಗೊಳಗಾಗಿ ಆತ ಗಂಗಾನದಿ ದಡಕ್ಕೆ ಬಂದು "ನಾನು ಅನಾಥ ಈಗ ಮತ್ತಷ್ಟು ಅನಾಥನಾಗಿರುವೆ.... ಬಾಲ್ಯವನ್ನು ನಿನ್ನ ಮಡಿಲಲ್ಲಿ ಕಳೆದಿರುವೆ. ಈಗ ಮತ್ತೆ ಇಲ್ಲಿಗೆ ಓಡಿ ಬಂದಿರುವೆ. ನನಗೆ ಬೇರೆ ಗತಿಯಿಲ್ಲ. ನಿನ್ನ ಬಳಿ ಬಂದಿರುವೆ. ನಿನಗಿಷ್ಟವಾದದ್ದನ್ನು ಮಾಡು. ನನಗೆ ಸದ್ಗತಿ ತೋರು."(ರಸಗಂಗಾಧರ, ಪು-೫೫) ಎಂದು ಗಂಗಾನದಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವನು.

ಒಂಬತ್ತನೆಯ ದೃಶ್ಯದಲ್ಲಿ ಲಾವಂಗಿ ಮತ್ತು ಆಸ್ಥಾನದ ದಾಸಿಯ ನಡುವೆ ಮಾತುಕತೆ ನಡೆಯುತ್ತದೆ. ಇಲ್ಲಿ ದಾಸಿ ಲಾವಂಗಿಗೆ ಜಗನ್ನಾಥ ಪಂಡಿತರು ಆತ್ಮಹತ್ಯೆ ಮಾಡಿಕೊಂಡ ವಿಚಾರ ತಿಳಿಸುವಳು. ಈ ಘಟನೆಯಿಂದ ಲಾವಂಗಿ ತೀವ್ರ ಸಂಕಟಕ್ಕೊಳಗಾಗಿ, "ಮೆಕ್ಕಾದ ದೈವವಾಣಿಯನ್ನು ಅವರಿಗೆ ಕೇಳಿಸಿದ್ದೆ. ಕೃಷ್ಣನ ಕೊಳಲ ನಾದವನ್ನು ನನಗೆ ಕೇಳಿಸಿದ್ದರು. ಈ ಕೃಷ್ಣನಿಗೆ ನಾನು ರಾಧೆಯಾಗಿದ್ದೆ. ಯಾವ ಕಾಲದ ರಾಧೆಗೂ ವಿರಹ ತಪ್ಪಿದ್ದಲ್ಲವೇನೊ."(ರಸಗಂಗಾಧರ, ಪು-೫೯) ಎಂದು ತನ್ನನ್ನು ತಾನು ಮಾತನಾಡುತ್ತಾ, ತನ್ನ ನೋವು ಯಾತನೆಯನ್ನು ತೋಡಿಕೊಳ್ಳುವಳು. ಚರಿತ್ರೆಯುದ್ದಕ್ಕೂ ಬಹುತೇಕ ಪ್ರೀತಿಗಳು ಯಾವುದ್ಯಾವುದೋ ಕಾರಣಗಳಿಂದ, ಯಾವುದ್ಯಾವುದೋ ಶಕ್ತಿಗಳಿಂದ ದೂರಾದದ್ದವೇ ಹೆಚ್ಚು; ಮತ್ತೇ ಅವುಗಳು ಒಂದಾಗುವುದು ನೆನಪುಗಳಲ್ಲಿ ಮಾತ್ರ. ಇಲ್ಲಿನ ಜಗನ್ನಾಥ ಪಂಡಿತ-ಲಾವಂಗಿಯರ ಪಾಡು ಅದೇ. ನಂತರದಲ್ಲಿ ಜಗನ್ನಾಥ ಪಂಡಿತರು ಬರೆದ 'ರಸಗಂಗಾಧರ'ವನ್ನು ಉಳಿಸಿಕೊಂಡು ಅದನ್ನು ಪೂರ್ಣಗೊಳಿದ್ದಕ್ಕಾಗಿ ಸೈನಿಕರು ಬಂದು ರಾಜಾಜ್ಞೆ ಎಂದು ಹೇಳಿ, ಲಾವಂಗಿ ಬರೆದ ಹಸ್ತಪ್ರತಿಗಳನ್ನು ಹೊತ್ತೊಯಿದು ಸುಡುವರು.

ಹತ್ತನೆಯ ದೃಶ್ಯದಲ್ಲಿ ಲಾವಂಗಿ ತುಂಬಿ ಹರಿಯುತ್ತಿರುವ ಯಮುನೆ ನದಿ ತೀರದಲ್ಲಿ ಏಕಾಂಗಿಯಾಗಿ ನಿಂತಿರುತ್ತಾಳೆ. ಇಲ್ಲಿ ಅವಳು ಜೀವನದಲ್ಲಿ ಚೈತನ್ಯವನ್ನು ಕಳೆದುಕೊಂಡು "ಬೇಸರಾಗಿದೆ ಮನ, ಬಂಗಾರದರಮನೆಯಲ್ಲಿ ಗೋಡೆಯಿಲ್ಲದ ಬಯಲ ತೋರಿರೆ,.... ಮೆತ್ತನೆಯ ಗಾದಿಗಳೆಲ್ಲ ಮುಳ್ಳಾಗಿ ಚುಚ್ಚುತಿವೆ ಹಸಿರ ಹುಲ್ಲಿನ ನಡು ಮಲಗಿಸಿರೆ,.... ಖಡ್ಗ ಭರ್ಚಿಗಳ ನಡು ಕ್ರೂರವಾಗಿದೆ ಹೃದಯ ಕ್ಷಣ ಕೋಗಿಲೆಯ ದನಿಯ ಕೇಳಿಸಿರೆ,.... ಬಾದಷಹಾನ ಕಣ್ಣಿನಿಶಾರೆಯಲಿ ನಡೆನಡೆದು ಸಾಕಾಗಿದೆ ನಿಜದ ಬದುಕಿನ ಹಾದಿ ತೋರಿರೆ...."(ರಸಗಂಗಾಧರ, ಪು-೬೨, ೬೩) ಎಂದು ಹೇಳುವುದರೊಂದಿಗೆ ಸುತ್ತಲು ಕತ್ತಲು ಆವರಿಸಿ ನಾಟಕ ಕೊನೆಗೊಳ್ಳುತ್ತದೆ. ಇಲ್ಲಿ ಲಾವಂಗಿ ಬಯಸುತ್ತಿರುವುದು ಬಿಡುಗಡೆ; ಅದು ಸುತ್ತಲೂ ಆವರಿಸಿರುವ ಕ್ರೂರತೆಯಿಂದ ಬಿಡುಗಡೆ. ಈ ಕ್ರೂರತೆ ಯಾವತ್ತೂ ಕೋಮಲತೆಯನ್ನು ನಾಶಗೊಳಿಸುತ್ತಲೇ ಇರುತ್ತದೆ. ಇಲ್ಲಿನ ಎರಡು ಪ್ರೀತಿಯ ಕೋಮಲ ಮನಸ್ಸುಗಳು ಪ್ರಭುತ್ವ ಮತ್ತು ಧರ್ಮದ ಕ್ರೂರತೆಯಿಂದ ನಲುಗಿ ನಶಿಸಿದ್ದೇ ಇದಕ್ಕೆ ನಿದರ್ಶನವಾಗಿದೆ.

ಕುತೂಹಲಪೂರ್ಣವಾಗಿ ಓದಿಸಿಕೊಂಡು ಹೋಗುವ ನಾಟಕ ಮತ್ತು ಓದಿದ ನಂತರ ಓದುಗರನ್ನು ಕೇಲಕಾಲ ತನ್ನ ಪ್ರಭಾವದಲ್ಲಿ ಹಿಡಿದಿಡುವ ಗುಣವುಳ್ಳ ನಾಟಕ ಇದಾಗಿದೆ. ನಾಟಕದಲ್ಲಿ ಮುಖ್ಯವಾಗಿ ಜಗನ್ನಾಥ ಪಂಡಿತ-ಲಾವಂಗಿಯರ ಪ್ರೀತಿ, ಜಗನ್ನಾಥ ಪಂಡಿತ-ದಾರಾಶಿಖೋರ ಸ್ನೇಹ ಮತ್ತು ಔರಂಗಜೇಬನ ಕ್ರೂರ ಪ್ರಭುತ್ವ ಅನಾವರಣಗೊಂಡಿದೆ. ನಾಟಕದಲ್ಲಿನ ಪಾತ್ರ-ಪಾತ್ರಗಳೊಂದಿಗಿನ ಸಂಭಾಷಣೆ ಹಾಗೂ ಸಂಭಾಷಣೆಯಲ್ಲಿ ಬಳಕೆಗೊಂಡ ಭಾಷೆ ಓದುಗರನ್ನು ಕೇಲಕಾಲ ಮಂತ್ರಮುಗ್ಧರನ್ನಾಗಿಸುತ್ತದೆ. ಈ ನಾಟಕ ಭಾರತದಲ್ಲಿ ಮೊಗಲರ ಆಳ್ವಿಕೆ ಕಾಲದ ವಿಷಯವಸ್ತು ಒಳಗೊಂಡಿರುವುದರಿಂದ ಇದೊಂದು ಐತಿಹಾಸಿಕ ನಾಟಕವಾಗಿದೆ. ಇಲ್ಲಿನ ನಾಯಕ ಪಾತ್ರ ಕೊನೆಗೆ ಆತ್ಮಹತ್ಯೆಗೆ ಶರಣಾಗುವುದರಿಂದ ಇದೊಂದು ದುರಂತ ನಾಟಕವೂ ಆಗಿದೆ. ಅಲ್ಲದೆ ಈ ನಾಟಕ ಐತಿಹಾಸಿಕವಾಗಿರುವಂತೆ ಸಮಕಾಲೀನವೂ ಆಗಿದೆ. ಅಧಿಕಾರ, ಧರ್ಮ, ಪ್ರೀತಿಗೆ ಸಂಬಂಧಿಸಿದ ಕೆಲವು ಸಮಕಾಲೀನ ಪಾಠವೂ ಇಲ್ಲಿದೆ. ಅಲ್ಲದೇ ಯಾವುದೇ ಒಂದು ನಾಟಕಕ್ಕೆ ಪ್ರಾಮುಖ್ಯತೆಯು ಅದರ ರಂಗಪ್ರಯೋಗದಲ್ಲಿ ದೊರೆಯುತ್ತದೆ. ಇಲ್ಲಿ ಏಕಕಾಲಕ್ಕೆ ಹಲವಾರು ಜನರು ರಸಾನುಭವ ಹೊಂದಬಹುದು. ಅಂತೆಯೇ ಈ ನಾಟಕ ರಂಗದ ಮೇಲೆ ಪ್ರಯೋಗಗೊಂಡು ಯಶಸ್ವಿಯಾಗಿದೆ.

ಹೀಗೆ ವಿಕ್ರಮ ವಿಸಾಜಿಯವರ 'ರಸಗಂಗಾಧರ' ನಾಟಕವು ಐತಿಹಾಸಿಕ ವಿಷಯ ವಸ್ತುವನ್ನೊಳಗೊಂಡು, ವಿದ್ವತ್ತು, ಪ್ರೀತಿ, ಸ್ನೇಹ, ಪ್ರಭುತ್ವಗಳ ಸೂಕ್ಷ್ಮ ಒಳನೋಟಗಳನ್ನು ಚಿತ್ರಿಸುತ್ತಾ, ಕನ್ನಡದ ಮಹತ್ವದ ನಾಟಕಗಳಲ್ಲಿ ಒಂದಾಗಿ ನಿಲ್ಲುತ್ತದೆ. ಇದು ಕನ್ನಡದ ಕೆಲವೇ ಕೆಲವು ಮಹತ್ವದ ದುರಂತ ಐತಿಹಾಸಿಕ ನಾಟಕಗಳಲ್ಲಿ ಒಂದಾಗಿದೆ.

- **ಪರಾಮರ್ಶನ ಗ್ರಂಥಗಳು:**

೧. ರಸಗಂಗಾಧರ - ವಿಕ್ರಮ ವಿಸಾಜಿ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೮.

೨. ಹೊಸಗನ್ನಡ ಸಾಹಿತ್ಯ ಚರಿತ್ರೆ - ಎಲ್. ಎಸ್. ಶೇಷಗಿರಿರಾವ್, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೨೦.

೩. ಆಧುನಿಕ ಕನ್ನಡ ನಾಟಕ - ಕೆ. ಮರುಳಸಿದ್ದಪ್ಪ, ಅಂಕಿತ ಪುಸ್ತಕ, ಬೆಂಗಳೂರು, ೨೦೧೩.

೪. ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ-೬ - ಪ್ರ. ಸಂ. ಅರವಿಂದ ಮಾಲಗತ್ತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೧೪.